# ಸ್ವಾಮಿ ಅಶೇಷಾನಂದ (೧೮೯೫ - ೧೯೯೬)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**

ಅನುವಾದ: **ಕುಮಾರಿ ಪಿ. ಉಷಾ**

ಭಾಗ ೨

೧೯೭೫ರಲ್ಲಿ ಹಾಲಿವುಡ್ ಕಾನ್ವೆಂಟ್ ಬಿಲ್ಡಿಂಗ್‌ನ ಉದ್ಘಾಟನೆಗೆ ಸ್ವಾಮಿ ಅಶೇಷಾನಂದರನ್ನು ಆಮಂತ್ರಿಸಲು ನಾನು ಪ್ರಭವಾನಂದಜಿಯವರನ್ನು ವಿನಂತಿಸಿದೆ. ಅವರು ಹಾಗೂ ಇತರ ಸಾಧುಗಳು ಆಗಮಿಸಿದ್ದರು. ನಂತರ ೧೯೭೬ರಲ್ಲಿ ಪ್ರಭವಾನಂದಜಿ ನಿಧನರಾದಾಗ ಅವರ ಸ್ಮಾರಕ ಸಭೆಗೆ ಬಂದಿದ್ದರು. ಆನಂತರ ಅವರು ಆಶ್ರಮ ಸೇರಿದ ಮಹಿಳೆಯರಿಗೆ ಬ್ರಹ್ಮಚರ್ಯ, ಸಂನ್ಯಾಸ ಹಾಗೂ ಪುರುಷರಿಗೆ ಬ್ರಹ್ಮಚರ್ಯ ದೀಕ್ಷೆ ನೀಡಲು ಹಾಲಿವುಡ್, ಸ್ಯಾನ್‌ಫ್ರಾನ್ಸಿಸ್ಕೋ ಹಾಗೂ ಇತರ ಸ್ಥಳಗಳಿಗೆ ಭೇಟಿ ನೀಡುತ್ತಿದ್ದರು. ಬೇಲೂರು ಮಠದ ನಿಯಮಾನುಸಾರ ಅಮೆರಿಕಾದ ಅತ್ಯಂತ ಹಿರಿಯ ಸಾಧುಗಳು ಈ ರೀತಿ ದೀಕ್ಷೆಯನ್ನು ನೀಡುವ ಅಧಿಕಾರವನ್ನು ಹೊಂದಿದ್ದಾರೆ.

೧೯೭೫ರಲ್ಲಿ ಸ್ವಾಮಿ ಸತ್ಪ್ರಕಾಶಾನಂದರು ದೇಹತ್ಯಾಗ ಮಾಡಿದಾಗ ಅವರು ಸೇಂಟ್ ಲೂಯಿಸ್‌ನಲ್ಲಿ ನಡೆದ ಸ್ಮಾರಕ ಸಭೆಗೆ ಬಂದಿದ್ದರು; ನಂತರ ೧೯೮೪ರಲ್ಲಿ ಬ್ರಹ್ಮಚಾರಿ ಥಾಮಸ್‌ಗೆ ದೀಕ್ಷೆಯನ್ನು ನೀಡಲೂ, ೧೯೮೮ರಲ್ಲಿ ಆಶ್ರಮದ ಸುವರ್ಣ ಜಯಂತಿ ಸಂದರ್ಭದಲ್ಲೂ ಬಂದಿದ್ದರು. ಆಗ ಅವರಿಗೆ ಸೇವೆ ಮಾಡುವ ಸುಸಂದರ್ಭ ನನಗೆ ಒದಗಿತ್ತು. ಊಟ ಮಾಡುವಾಗ ಅವರು ನಾನಾ ಕತೆಗಳನ್ನು ಹೇಳುತ್ತಿದ್ದರು. ಅವರ ಮಾತುಗಳನ್ನೆಲ್ಲ ನಾನು ಟೇಪ್ ಮಾಡಿಕೊಂಡಿದ್ದು ಅವುಗಳಿಂದ ಪೋರ್ಟ್‌ಲ್ಯಾಂಡ್ ಕೇಂದ್ರದ 'ಶ್ರೀಮಾತೆಯವರ ಸ್ಮೃತಿಗಳ ಡಿ.ವಿ.ಡಿ.' ತಯಾರಿಸಲಾಗಿದೆ.

ಅಶೇಷಾನಂದರ ಕಾಲದಲ್ಲಿ ನಾನು ಅವರ ಒಡನಾಟದ ಲಾಭವನ್ನು ಪಡೆಯಲು ಕೆಲವೊಮ್ಮೆ ಪೋರ್ಟ್‌ಲ್ಯಾಂಡ್ ಆಶ್ರಮಕ್ಕೆ ಹೋಗಿದ್ದೆ. ಮಧ್ಯಾಹ್ನ ದೇವರಮನೆಯಲ್ಲಿ ಅವರು ಮಾಡುತ್ತಿದ್ದ ಪೂಜೆಯನ್ನು ನೋಡುತ್ತಿದ್ದೆ; ಪೂಜೆ ಯಾಂತ್ರಿಕ ಅಥವ ವಿಧ್ಯುಕ್ತವಾಗಿರುತ್ತಿರಲಿಲ್ಲ. ಆಂತರಿಕತೆಯಿಂದ ಹಾಗೂ ಭಾವಭಕ್ತಿಯಿಂದ ಅವರು ಠಾಕೂರರು, ಶ್ರೀಮಾತೆಯವರನ್ನು ಪೂಜಿಸುತ್ತಿದ್ದರು. ಭಕ್ತರು ಫಲ-ಪುಷ್ಪ-ಸಿಹಿತಿಂಡಿಗಳನ್ನು ನೈವೇದ್ಯಕ್ಕಾಗಿ ಸಜ್ಜುಗೊಳಿಸುತ್ತಿದ್ದರು. ಅಶೇಷಾನಂದರು ಸುಮಾರು ೧೨ ಗಂಟೆಯ ಹೊತ್ತಿಗೆ ಬಂದು ಪೂಜೆ ಮಾಡುತ್ತಿದ್ದರು. ಸಾಧು-ಭಕ್ತಾದಿಗಳು ಹಿಂದುಗಡೆ ಕುಳಿತು ಜಪಧ್ಯಾನ ಮಾಡುತ್ತಿದ್ದರು. ಅವರ ಮಂತ್ರೋಚ್ಚಾರಣೆ ಹಾಗೂ ಪೂಜೆಯನ್ನು ನೋಡಿದರೆ, ಜೀವಂತ ದೇವತೆಗೆ ಪೂಜೆ ಸಲ್ಲಿಸುವಂತಿರುತ್ತಿತ್ತು. ಪೂಜಾನಂತರ



ಅವರು ಶ್ರೀಮಾತೆಯವರಂತೆಯೆ ಭಕ್ತರಿಗೆ ಪ್ರಸಾದವನ್ನು ವಿತರಿಸುತ್ತಿದ್ದರು. ಒಂದು ದಿನ ಅವರು ನನಗೆ ಹೇಳಿದ್ದರು, 'ನಿನಗೆ ಬರೆಯುವುದು ಇಷ್ಟ; ನನಗೆ ಪೂಜೆ ಮಾಡುವುದೆಂದರೆ ಇಷ್ಟ.'

ಯಾವುದೇ ಸಂದರ್ಭದಲ್ಲಿ ನಾವು ಒಟ್ಟು ಸೇರಿದಾಗ ಅವರು ಠಾಕೂರರ ಶಿಷ್ಯಂದಿರನ್ನು ಕುರಿತು ಮಾತನಾಡುತ್ತ ನಮ್ಮ ಮನಸ್ಸನ್ನು ಉನ್ನತ ಸ್ತರಕ್ಕೆ ಒಯ್ಯುತ್ತಿದ್ದರು. ಅವರೆಂದೂ ಪರನಿಂದೆ-ಪರಚರ್ಚೆಗಳನ್ನು ಮಾಡಿದವರಲ್ಲ. ಒಂದು ದಿನ ಒಬ್ಬ ವ್ಯಕ್ತಿಯ ಈರ್ಷ್ಯೆಯ ಬಗ್ಗೆ ಅವರಿಗೆ ಹೇಳಿದಾಗ ಅವರು 'ಇದು ಮೈಯುರಿಯಲ್ಲ; ಇದು ಮನೋವಿಕಾರ' ಎಂದರು. ಚರ್ಚೆ ಅಲ್ಲಿಗೇ ಮುಗಿಯಿತು. 'ಯಾರ ದೋಷವನ್ನೂ ಕಾಣಬೇಡ' ಎಂಬ, ತಮ್ಮ ಗುರುವಿನ ಆದೇಶವನ್ನು ಅವರು ಪಾಲಿಸುತ್ತಿದ್ದರು.

ಸ್ವಾಮಿ ಅಶೇಷಾನಂದರನ್ನು ಎರಡು ಪ್ರಕಾರವಾಗಿ ನಾನು ಕಂಡಿದ್ದೇನೆ. ಒಂದೆಡೆ ಅವರು ವಾತ್ಸಲ್ಯಮಯಿ ಮಾತೆಯಂತಿದ್ದರೆ, ದಂಡದಾತಾ ಪಿತಾ ಕೂಡ ಆಗಿದ್ದರು. ಒಮ್ಮೊಮ್ಮೆ ತಪ್ಪಿತಸ್ಥರನ್ನು ತೀವ್ರವಾಗಿ ಬಯ್ಯುತ್ತಿದ್ದರು; ಆದರೆ ಅವರಾದರೋ ಅದನ್ನು ಮಹಾರಾಜರ ಆಶೀರ್ವಾದವೆಂದೇ ಬಗೆಯುತ್ತಿದ್ದರು. ಮಹಾರಾಜರು ಬೈಗುಳ ಅವರ ಬಾಯಿಂದ ಹೊರಟಿದೆಯೇ ಹೊರತು, ಅವರ ಹೃದಯದಿಂದಲ್ಲವೆಂದು ತಿಳಿದಿದ್ದರು. ತಪ್ಪು ಮಾಡಿದವರ ಅಹಂಕಾರವನ್ನು ಮುರಿದು ಅವರನ್ನು ವಿನಯ

ವಂತರನ್ನಾಗಿ ಮಾಡಲೆಂದೇ ಅವರು ಬಯ್ಯುತ್ತಿದ್ದರೆಂದು ನನಗನ್ನಿಸುತಿತ್ತು. ಮಹಾರಾಜರು ಯಾವಾಗಲೂ ಭಕ್ತರ ಹಿತೈಷಿಯಾಗಿದ್ದು ಅವರನ್ನು ಉತ್ತಮರನ್ನಾಗಿಸಲು ಪ್ರಯತ್ನಿಸುತ್ತಿದ್ದರು. ಹಿಂದೂ ಶಾಸ್ತ್ರಗಳಲ್ಲಿ ಒಂದು ಮಾತಿದೆ – **'ಕ್ರೋಧೋಽಪಿ ದೇವಸ್ಯ ವರೇಣ ತುಲ್ಯಃ'** – 'ದೇವತೆಗಳ ಕ್ರೋಧವೂ ವರಕ್ಕೆ ಸಮಾನ.'

ಒಂದು ದಿನ ಮಿಸ್ಟರ್ ಬುಷ್ ಪ್ರಾಪಂಚಿಕ ವಿಷಯದ ಬಗ್ಗೆ ಮಾತನಾಡುತ್ತಿದ್ದರು. ಮಹಾರಾಜರು ದನಿಯೇರಿಸಿ, ''ಮಿ. ಬುಷ್, ಇವನ್ನೆಲ್ಲ ಇಲ್ಲಿ ಹೇಳಬೇಡಿ. ಭಗವಂತನ ಹೊರತು ಏನನ್ನೂ ಮಾತನಾಡಬೇಡಿ'' ಎಂದಾಗ ಬುಷ್ ಅದಕ್ಕೊಪ್ಪಿ, ''ಸ್ವಾಮಿ, ನೀವು ಸರಿಯಾಗಿಯೇ ಹೇಳುತ್ತಿರುವಿರಿ'' ಎಂದರು. ಪೋರ್ಟ್‌ಲ್ಯಾಂಡ್‌ನ ಭಕ್ತರು ಮಹಾರಾಜರ ಕಟುನುಡಿಗಳನ್ನು ಆದರದಿಂದಲೇ ಸ್ವೀಕರಿಸುತ್ತಿದ್ದರು. ಅನೇಕ ದಿನಗಳು ಬೈಗುಳವಿಲ್ಲದೆ ಕಳೆದರೆ ಭಕ್ತರು ಚಿಂತೆಗೀಡಾಗುತ್ತಿದ್ದರು. 'ಮಹಾರಾಜರು ಪ್ರಪಂಚ ಬಿಟ್ಟು ಹೋಗುವರೇನು!' ಎಂದು ಕಳವಳಗೊಳ್ಳುತ್ತಿದ್ದರು. ಬ್ರಹ್ಮಚಾರಿಯೊಬ್ಬ ಒಮ್ಮೆ ಅವರನ್ನು ಕೇಳಿದ, 'ಸ್ವಾಮಿಗಳೆ! ನನಗೊಂದು ಸಮಸ್ಯೆಯಿದೆ.' ಉತ್ತರವಾಗಿ ಅವರೆಂದರು, 'ಸಮಸ್ಯೆಯೆ? ಶ್ರೀಮಾತೆಯವರಲ್ಲಿ ಪ್ರಾರ್ಥಿಸು.' ಮತ್ತೊಂದು ದಿನ ಅದೇ ಬ್ರಹ್ಮಚಾರಿ, 'ಸ್ವಾಮಿಗಳೆ, ನಾನು ಖಿನ್ನನಾಗಿರುವೆ' ಎಂದಾಗ ಅವರು, 'ಅದಕ್ಕೆ ಹೊಂದಿಕೋ' ಎಂದು ಉತ್ತರಿಸಿದರು.

ಒಂದು ದಿನ ಮಹಾರಾಜರನ್ನು ''ನೀವು ಭಾನುವಾರದ ಉಪನ್ಯಾಸಗಳಿಗೆ ಹೇಗೆ ತಯಾರಾಗುತ್ತೀರಿ?'' ಎಂದು ಕುತೂಹಲ ವ್ಯಕ್ತಪಡಿಸಿದಾಗ ಅವರೆಂದರು, ''ಭಾನುವಾರ ಬೆಳಗ್ಗೆ ನಾನು ಉಪನಿಷತ್ತು, ಗೀತೆ ಹಾಗೂ ಶ್ರೀರಾಮಕೃಷ್ಣ- ಸ್ವಾಮೀಜಿಯವರ ಪುಸ್ತಕಗಳನ್ನೋದಿದಾಗ ಕೆಲವು ವಿಚಾರಗಳು ಮನಸ್ಸಿಗೆ ಬರುತ್ತವೆ; ಅವುಗಳ ಆಧಾರದ ಮೇಲೆ ಮಾತನಾಡುತ್ತೇನೆ.'' ಉಪನ್ಯಾಸಕ್ಕೆ ೧೫-೨೦ ನಿಮಿಷಗಳ ಮೊದಲು ಮಿ.ಬುಷ್ ಯಾವುದಾದರೂ ಪುಸ್ತಕವನ್ನು ಓದುತ್ತಿದ್ದರು. ಮಹಾರಾಜರು ಹಾಲ್ ಒಳಗೆ ಹೋಗುತ್ತಲೇ ಅವರು ಓದುವುದನ್ನು ನಿಲ್ಲಿಸುತ್ತಿದ್ದರು. ಮಹಾರಾಜರು ಭಾಷಣ ನೀಡಲು ಪ್ರಾರಂಭಿಸಿದರೆ ಅವರಿಗೆ ಸಮಯದ ಪ್ರಜ್ಞೆ ಇರುತ್ತಿರಲಿಲ್ಲ. ಅವರು ಯಾವಾಗ ಮುಗಿಸುತ್ತಾರೆಂಬುದು ಯಾರಿಗೂ ತಿಳಿಯದು. ಅವರು ಪ್ಲೇಟೋ, ಅರಿಸ್ಟಾಟಲ್‌ರ ವಿಚಾರಗಳಿಂದ ಶುರು ಮಾಡಿದ ಭಾಷಣ, ಸಂತ ಥಾಮಸ್ ಅಕ್ವಿನಾಸ್ ಹಾಗೂ ಮೇಯಿಸ್ಟರ್ ಎಕ್ಹಾರ್ಟ್‌ರನ್ನು ಉಲ್ಲೇಖಿಸುತ್ತ, ಹೆಯಿಸನ್‌ಬರ್ಗ್ ಹಾಗೂ ಐನ್‌ಸ್ಟೈನ್ ಬಗ್ಗೆಯೂ ಹೇಳಿ ಠಾಕೂರರು, ಶ್ರೀಮಾತೆ ಹಾಗೂ ಠಾಕೂರರ ಸಂನ್ಯಾಸಿ ಶಿಷ್ಯರ ವಿಷಯಗಳ ಉಲ್ಲೇಖದಿಂದ ಅಂತ್ಯಗೊಳ್ಳುತ್ತಿತ್ತು. ಪ್ರತಿಯೊಂದು ಉಪನ್ಯಾಸದಲ್ಲೂ ವೈರಾಗ್ಯ, ಸಮಾಧಿ, ಜೀವನ್ಮುಕ್ತಿಯ ಕುರಿತು ಮಾತನಾಡುತ್ತಿದ್ದರು. ವೃದ್ಧಾಪ್ಯದಲ್ಲೂ ಅವರ ಧ್ವನಿ ಶಕ್ತಿಯುತವಾಗಿತ್ತು. ಕೆಲವೊಮ್ಮೆ ಭಾಷಣದಲ್ಲಿ ಹಾಸ್ಯವೂ ಇರುತ್ತಿತ್ತು. ತಮ್ಮದೇ ಆದ ಕೆಲವು ಸ್ವಂತ ಉಕ್ತಿಗಳನ್ನು ಹೇಳುತ್ತಿದ್ದರು – 'ಭಗವದ್ದರ್ಶನ ಹಾಗೂ ದೂರದರ್ಶನ ಎಂದಿಗೂ ಜತೆಜತೆಯಲ್ಲಿ ನಡೆಯದು.'

ಅಶೇಷಾನಂದಜಿ ದೈಹಿಕವಾಗಿ ದೃಢವಾಗಿಷ್ಟು ದಿನ ಯಾರನ್ನಾದರೂ ಏರ್‌ಪೋರ್ಟ್‌ನಿಂದ ಕರೆತರಬೇಕಾಗಿದದಲ್ಲಿ ತಾವೇ ಹೋಗುತ್ತಿದ್ದರು. ಅವರ ನಿರಭಿಮಾನತೆ ಹಾಗೂ ಸಾಧು-ಸೋದರರ ಬಗೆಗಿನ ಪ್ರೀತಿ ಅಗಾಧ. ನಾನವರನ್ನು ಕಡೆಯ ಬಾರಿ ಕಂಡದ್ದು ೧೯೮೦ರ ಜುಲೈ ೧೮ರಂದು ಪೋರ್ಟ್‌ಲ್ಯಾಂಡ್‌ನಲ್ಲಿ. ಆಗವರು ಹಾಸಿಗೆ ಹಿಡಿದಿದ್ದು ಮೂಗಿನ ನಳಿಕೆಯಿಂದ ದ್ರವ ಪದಾರ್ಥಗಳ ಆಹಾರವನ್ನು ಮಾತ್ರ ಅವರಿಗೆ ನೀಡಲಾಗುತ್ತಿತ್ತು. ಅವರು ಎಚ್ಚರವಾಗಿದ್ದು, ಅವರ ನೆನಪಿನ ಶಕ್ತಿಯೂ ಬಲವಾಗಿತ್ತು.

೧೯೮೦ರ ಅಕ್ಟೋಬರ್ ತಿಂಗಳಿನಲ್ಲಿ ೯೭ ವರ್ಷ ವಯಸ್ಸಿನ ಅಶೇಷಾನಂದಜಿ ಮಹಾರಾಜರು ಶರೀರವನ್ನು ತ್ಯಜಿಸಿದರು. ನವೆಂಬರ್ ೨೫ರಂದು ಪೋರ್ಟ್‌ಲ್ಯಾಂಡ್‌ನಲ್ಲಿ ಅವರ ಸ್ಮೃತಿ ಸಭೆ ನಡೆದಾಗ ಅಮೆರಿಕದ ಹೆಚ್ಚಿನ ಸಾಧುಗಳೆಲ್ಲ ಅದರಲ್ಲಿ ಪಾಲ್ಗೊಂಡು ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದೆವು.

ಸ್ವಾಮಿ ಅಶೇಷಾನಂದರು ರಾಮಕೃಷ್ಣ ಸಂಘದ ಒಬ್ಬ ಆದರ್ಶ ಸಾಧುಗಳಾಗಿದ್ದರು. ಇಂಥ ಸಾಧುಗಳು ಅತಿ ವಿರಳ. ಅವರು ಹರಿ ಮಹಾರಾಜರ ಸಂಗಲಾಭವನ್ನು ಪಡೆದಿದ್ದರು. 'ಜೀವನ್ಮುಕ್ತಿ ಸುಖಪ್ರಾಪ್ತಿ ಹೇತವೇ ಜನ್ಮಧಾರಿತಮ್' ಎಂದು ಹರಿ ಮಹಾರಾಜರು ಹೇಳುತ್ತಿದ್ದರು. 'ಮನುಜ ಜನ್ಮವಿರುವುದು ಜೀವನ್ಮುಕ್ತಿಯ ಸುಖವನ್ನು ಅನುಭವಿಸುವುದಕ್ಕೋಸ್ಕರ' – ಇಲ್ಲವಾದರೆ, ನಿತ್ಯಮುಕ್ತವಾಗಿರುವ ಆತ್ಮಕ್ಕೆ ಸಂಸಾರಕಾಮನೆಯೇಕೆ? ಈ ಶ್ಲೋಕವು ಅವರ ಜೀವನದ ಲಕ್ಷ್ಯವನ್ನು ನಿರ್ದೇಶಿಸಿತ್ತು. ಸ್ವಾಮಿ ಅಶೇಷಾನಂದರು ತಮ್ಮ ಉಪನ್ಯಾಸ ಹಾಗೂ ಸಂಭಾಷಣೆಗಳಲ್ಲಿ ಜೀವನ್ಮುಕ್ತಿ ಹಾಗೂ ತೀವ್ರ ವೈರಾಗ್ಯಗಳ ಬಗ್ಗೆ ಹೇಳುತ್ತಿದ್ದರು. ಅವನ್ನು ನೋಡಿದರೆ ಭಗವಂತನು ಅವರನ್ನು ಪ್ರವೇಶಿಸಿದಂತೆ ತೋರುತ್ತಿತ್ತು.ಅನುಭಾವಿ ಸಂತರಾಗಿದ್ದ ಅವರು ಪೋರ್ಟ್‌ಲ್ಯಾಂಡ್‌ನ ಆ ಚಿಕ್ಕ ವೇದಾಂತ ಕೇಂದ್ರದಲ್ಲಿ ಅಡಗಿದ್ದರು.

ಸ್ವಾಮಿ ಅಶೇಷಾನಂದರು (ಕಿರಣ್ ಮಹಾರಾಜ್) ರಾಮಕೃಷ್ಣ ಮಹಾಸಂಘದ ಒಬ್ಬ ಖ್ಯಾತ ಸಂನ್ಯಾಸಿಗಳಾಗಿದ್ದರು. ಅವರು ಸ್ವಾಮಿ ಶಾರದಾನಂದರ ಸೇವಕರೂ, ಕಾರ್ಯದರ್ಶಿಗಳೂ ಆಗಿದ್ದರು. ಅವರು ೧೯೨೧ರಿಂದ ೧೯೨೭ರ ವರೆಗೆ 'ಉದ್ಬೋಧನ' ಹಾಗೂ ಕಾಶಿಯಲ್ಲಿದ್ದಾಗ ಶಾರದಾನಂದ, ಯೋಗಿನ್ ಮಾ, ಗೋಲಾಪ್ ಮಾ ಹಾಗೂ ಇತರ ಸಾಧುಗಳಿಂದ ಕೇಳಿದ್ದನ್ನೂ ನೋಡಿದ್ದನ್ನೂ ತಮ್ಮ ಡೈರಿಗಳಲ್ಲಿ ಬರೆಯುತ್ತಿದ್ದರು. ಡೈರಿಯ ಪುಟಗಳು ಮಾಸಿಹೋಗಿದ್ದು ಜರ್ಜರಿತವಾಗಿಯೂ ಹೋಗಿವೆ. ೧೯೭೩ರಲ್ಲಿ ಪೋರ್ಟ್‌ಲ್ಯಾಂಡ್‌ನಲ್ಲಿ ಅವರು ತಮ್ಮ ಈ ಡೈರಿ

ಗಳನ್ನು ನನಗೆ ಕೊಟ್ಟು ೧೯೮೪ರ ಮೇ ೪ರಂದು ಸೇಂಟ್ ಲೂಯಿಸ್‌ಗೆ ಬಂದಾಗ ಈ ಡೈರಿಗಳ ಬಗ್ಗೆ ಹೇಳಿದರು. ಇತಿಹಾಸದ ಪುಟಗಳಲ್ಲಿ ಈ ಹಿಂದಿನ ಸ್ಮೃತಿಗಳು ಸುರಕ್ಷಿತವಾಗಿರಲೆಂಬ ಉದ್ದೇಶದಿಂದ ಬಹಳ ಕಷ್ಟಪಟ್ಟು ಈ ಜರ್ಜರಿತ ಡೈರಿಗಳಿಂದ ಉಪಯುಕ್ತ ಅಂಶಗಳನ್ನು ಸಂಗ್ರಹಿಸಿ, ಕೆಲವೆಡೆ ಪದ ಜೋಡಣೆ ಮಾಡಿ ಅದು ಅರ್ಥವಾಗುವಂತೆ ಮಾಡಿರುವೆ.

### ಸ್ವಾಮಿ ಯೋಗಾನಂದರ ನೆನಪುಗಳು

ಸ್ವಾಮಿ ಶಾರದಾನಂದರು ಹೇಳಿದರು – ಸ್ವಾಮಿ ಯೋಗಾನಂದರು ಬೃಂದಾವನದಲ್ಲಿದ್ದಾಗ ಕಠೋರ ಜೀವನವನ್ನು ನಡೆಸಿದ್ದರು. ಸರಿಯಾಗಿ ಆಹಾರ ಸೇವಿಸುತ್ತಿರಲಿಲ್ಲ. ಕೆಲವೊಮ್ಮೆ ದಿನವಿಡೀ ಮರದಡಿಯಲ್ಲಿ ವಾಸಿಸುತ್ತ ಒಂದೆರಡು ರೊಟ್ಟಿಗಳನ್ನು ತಿನ್ನುತ್ತಿದ್ದರು. ಇಂಥ ಕಠೋರತೆಯನ್ನು ಕಂಡ ಯೋಗಿನ್ ಮಾ ಶ್ರೀಮಾತೆಯವರಿಗೆ ಹೇಳಿದರು, ''ಕಣ್ಣೆದುರು ಹೀಗಾಗುತ್ತಿರುವುದನ್ನು ನೋಡಲಾರೆ. ಅವನು ಮಠಕ್ಕೆ ಹೋಗಲಿ ಇಲ್ಲವೆ ಮನೆಗೆ ಹಿಂದಿರುಗಲಿ.'' ಅದನ್ನು ಕೇಳಿದ ಯೋಗೇನ್ ಮಹಾರಾಜರು ಗೋಲಾಪ್ ಮಾ-ಗೆ ಹೇಳಿದರು – ''ಅವರು ಶ್ರೀಮಾತೆಯವರಿಗೆ ಇವನ್ನೆಲ್ಲ ಹೇಳುವುದೇಕೆ? ಅವರಿಗೆ ನಾನೇನು ಮಾಡಿರುವೆ? ಅವರಿಗೇಕೆ ಇಷ್ಟು ತಲೆನೋವು?''

ಶ್ರೀಮಾತೆಯವರ ಸೇವೆಯೇ ಯೋಗೇನ್ ಮಹಾರಾಜರ ಮುಖ್ಯಧ್ಯೇಯವಾಗಿತ್ತು. ಬೇಲೂರಿನ ನೀಲಾಂಬರ ಬಾಬುರ ಮನೆಯಲ್ಲಿದ್ದಾಗ ಅವರು ಅಕ್ಕಿ, ಹಿಟ್ಟುಗಳನ್ನು ತಮ್ಮ ಹೆಗಲ ಮೇಲೆ ಹೊತ್ತು ತರುತ್ತಿದ್ದರು. ಒಂದು ದಿನ ಮಹಡಿಯ ಮೇಲಿಂದ ಇದನ್ನು ಕಂಡ ಶ್ರೀಮಾತೆಯವರು, ''ಯೋಗೇನ್ ಸಾಮಾನುಗಳನ್ನು ಬೆನ್ನ ಮೇಲೆ ಹೊತ್ತು ತರುವುದನ್ನು ನೋಡಿದರೆ ನನಗೆ ತಿನ್ನಲು ಮನಸ್ಸಾಗುವುದಿಲ್ಲ'' ಎಂದರು.

ನಾವೂ ಒಂದೆರಡು ದಿನಗಳು ನೀಲಾಂಬರ ಬಾಬುರ ಮನೆಯಲ್ಲಿದ್ದಾಗ ಶ್ರೀಮಾತೆಯವರಿಗಾಗಿ ಸಾಮಗ್ರಿಗಳನ್ನು ಖರೀದಿಸುತ್ತಿದ್ದವು. ಯೋಗೇನ್ ಮಹಾರಾಜರು ಶ್ರೀಮಾತೆಯವರಿಗೆ ಅದೆಷ್ಟು ಸೇವೆ ಮಾಡಿದ್ದರು! 'ಭಕ್ತನಾದರೆ ಮೂರ್ಖನೇಕಾಗುವೆ?' ಎಂಬ ಠಾಕೂರರ ಉಪದೇಶವನ್ನು ಅವರು ತಮ್ಮ ಜೀವನದಲ್ಲಿ ಪ್ರತಿಫಲಿಸಿದ್ದರು. ಶ್ರೀಮಾತೆಯವರ ತೀರ್ಥಯಾತ್ರೆಗಾಗಿ ಅವರು ೨೦೦ರೂ ೩೦೦ ರೂಪಾಯಿಗಳನ್ನು ಸಂಗ್ರಹಿಸಿ ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟಿದ್ದರು. ಯೋಗೇನ್ ಮಹಾರಾಜರು ನಿಧನ ಹೊಂದುವ ಮುನ್ನ ಶ್ರೀಮಾತೆಯವರು ಅವರ ಪತ್ನಿಯನ್ನು ಅವರ ಸೇವೆಗಾಗಿ ಕರೆಸಿದ್ದರು. ತಮ್ಮ ಸೋದರರ ಆಣತಿಯ ಮೇರೆಗೆ ಅವರ ಪತ್ನಿ ಆ ಹಣವನ್ನು ತೆಗೆದುಕೊಂಡು ಹೋದರು. ಶ್ರೀಮಾತೆಯವರು ಆಕೆಯನ್ನು ಬಹಳ ಪ್ರೀತಿಸುತ್ತಿದ್ದರು.

ಯೋಗೇನ್ ಸ್ವಾಮಿಗಳು ಶ್ರೀಮಾತೆಯವರಿಗೆ ಹೇಳಿದ್ದರು, ''ಅಮ್ಮ, ಠಾಕೂರರು ಕೆಲವು ಹುಡುಗರನ್ನು ತಯಾರು ಮಾಡಿದ್ದಾರೆ; ನೀವು ಕೆಲವು ಮಹಿಳೆಯರನ್ನು ತಯಾರು ಮಾಡಿ.'' ಆದರೆ ಅವರ ಹೆಂಡತಿ ತನ್ನ ತಂದೆ ಅಸ್ವಸ್ಥರೆಂದು ಶ್ರೀಮಾತೆಯವರಿಗೆ ಸುಳ್ಳು ನೆಪ ಹೇಳಿ ಹೊರಟುಹೋದರು. ನಂತರ ಅವರ ಸೋದರರು ಅವರಲ್ಲಿದ್ದ ಹಣ ಹಾಗೂ ಒಡವೆಗಳನ್ನು ಮಾರಿ ಬಂದ ಹಣವನ್ನು ತಾವೇ ತೆಗೆದುಕೊಂಡರು. ಮುಂದೆ ಅವರು ತುಂಬಾ ಕಷ್ಟಪಡಬೇಕಾಯಿತು.

ಮುಂದೆ ಶ್ರೀಮಾತೆಯವರು ಬಹಳ ಕಷ್ಟವನ್ನನುಭವಿಸಬೇಕಾಗುವುದೆಂದು ಯೋಗೇನ್ ಮಹಾರಾಜ್ ಹೇಳಿದ್ದರು. ಹಾಗೆಯೇ ಆಯಿತು. ಆದರೆ ಆಗಿನ್ನೂ ರಾಧು ಹುಟ್ಟಿರಲಿಲ್ಲ.

ಠಾಕೂರರು ಅವರ ಅಂಗವೊಂದನ್ನು ಸ್ಪರ್ಶಿಸಿದರು; ಆದ್ದರಿಂದಲೇ ಅವರು ಕಾಮವನ್ನು ಜಯಿಸಿದರು. ಅಂತಹ ತ್ಯಾಗಿ ಇನ್ನು ಕಂಡುಬರುವುದಿಲ್ಲ. ಅನೇಕ ಸಮಯ ಒಂದೇ ಮನೆಯಲ್ಲಿ ಇದ್ದರೂ ಅವರು ನಮ್ಮೊಡನೆ, ಶ್ರೀಮಾತೆಯವರೊಡನೆ ಅತಿ ಕಡಿಮೆ ಮಾತನಾಡುತ್ತಿದ್ದರು. ಶ್ರೀಮಾತೆಯವರ ಪ್ರಥಮ ಹಾಗೂ ಪ್ರಧಾನ ಶಿಷ್ಯರೆಂದರೆ ಅವರೇ. ಠಾಕೂರರು ಮೂರು-ನಾಲ್ಕು ಬಾರಿ ಶ್ರೀಮಾತೆಯವರಿಗೆ ಕಾಣಿಸಿಕೊಂಡು ಸ್ವಾಮಿ ಯೋಗಾನಂದರಿಗೆ ದೀಕ್ಷೆ ನೀಡಲು ಹೇಳಿದಾಗ ಮಾತ್ರ ಶ್ರೀಮಾತೆಯವರು ಅವರಿಗೆ ದೀಕ್ಷೆಯನ್ನು ನೀಡಿದರು.

ಗೋಲಾಪ್ ಮಾ ಹೇಳಿದರು: ಘುಸಡಿ ಹಳ್ಳಿಯ ರಾಜು ಗುಮಾಸ್ತರರ ಮನೆಯ ಬಾಡಿಗೆ ೬ ರೂಪಾಯಿ, ಬೇಲೂರಿನ ನೀಲಾಂಬರ ಬಾಬು-ರ ಮನೆಗೆ ೫೦ರೂ. ಗಿರೀಶ ಬಾಬು ಒಂದೂವರೆ ವರ್ಷಗಳು ಬಾಡಿಗೆಯನ್ನು ಕೊಟ್ಟು ಶ್ರೀಮಾತೆಯವರ ಸೇವೆಯನ್ನು ಮಾಡಿದರು. ಬಲರಾಮ ಬಾಬು ಬೃಂದಾವನದಲ್ಲಿ ಅವರ ಸೇವೆಯನ್ನು ಬಹಳಷ್ಟು ಮಾಡಿದ್ದರು. ಯೋಗೇನ್ ಮಹಾರಾಜ್ ಹಾಗೂ ಶರತ್ ಮಹಾರಾಜ್ ದೋಣಿಯಲ್ಲಿ ಬರುತ್ತಿದ್ದಾಗ ಹಡಗಿಗೆ ಡಿಕ್ಕಿ ಹೊಡೆದು ದೋಣಿ ಮಗುಚಿ ಮುಳುಗಿಹೋಗುವಂತಾಯಿತು. ಇದನ್ನು ಕಂಡ ಶ್ರೀಮಾತೆಯವರು ಠಾಕೂರರನ್ನು ಪ್ರಾರ್ಥಿಸತೊಡಗಿದರು. ಶ್ರೀಮಾತೆಯವರ ಅಡುಗೆಗಾಗಿ ಯೋಗೇನ್ ಮಹಾರಾಜರು ತುಪ್ಪದ ಡಬ್ಬವನ್ನು ಕೈಯಲ್ಲಿ ಹಿಡಿದು ತರುತ್ತಿದ್ದಾರೆ. ಆಗ ಸಾಮನುಗಳನ್ನು ಕೊಳ್ಳಲು ಬಾರಾನಗರಕ್ಕೆ ಹೋಗಬೇಕಾಗಿತ್ತು. ಘುಸುಡಿಯಿಂದ ೫-೬ ಸೇರು ಹಿಟ್ಟು, ಅಕ್ಕಿ, ಬೇಳೆ, ಎಣ್ಣೆಮಂತಾದ ಸಾಮಗ್ರಿಗಳನ್ನು ಅವರು ಬೆನ್ನ ಮೇಲೆ ಹೊತ್ತು ತರುತ್ತಿದ್ದರು. ಶ್ರೀಮಾತೆಯವರು ಅವರಿಗೆ ಹೆಚ್ಚು ಊಟ ಬಡಿಸುತ್ತಿದ್ದರು. ಯೋಗೇನ್ ಮಹಾರಾಜ್ ಒಂದಿಷ್ಟೂ ಚೆಲ್ಲದೆ ಎಲ್ಲವನ್ನೂ ತಿಂದು ಮುಗಿಸುತ್ತಿದ್ದರು. ಆಗ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿದ್ದುದರಿಂದ ೩-೪ ಗಂಟೆಯವರೆಗೆ ಭೋಜನದ ವ್ಯವಸ್ಥೆಯಿತ್ತು. ಅತೀವ ಶ್ರಮದಿಂದ ಶ್ರೀಮಾತೆಯವರ ಆರೋಗ್ಯ ಹದಗೆಟ್ಟಿತು.

*(ಮುಂದುವರಿಯುವುದು)*